# ಬರಬಾದ್!



ಅತಿ ದೊಡ್ಡ ಶುಷ್ಕ ಪ್ರದೇಶಗಳಲ್ಲಿ ಎರಡನೇ ಯದ್ದಾಗಿರುವ ಹೈದರಾಬಾದ್ ಕರ್ನಾಟಕ ಪ್ರದೇಶ ದಲ್ಲಿ ತಾಪಮಾನ 40 ಡಿಗ್ರಿ ತಲುಪಿದೆ. ಮಾರ್ಚ್ 30 ರಂದು ಕಲಬುರಗಿಯ ತಾಪಮಾನ ಎಂದಿಗಿಂತ 1.5 ಡಿಗ್ರಿ ಹೆಚ್ಚಿತ್ತು, ಅಂದರೆ 40.5 ಡಿಗ್ರಿ ಸೆಲ್ಷಿಯಸ್! ಅಂತೆಯೇ ವಿಜಯಪುರದಲ್ಲಿ ತಾಪಮಾನ 2.2 ಡಿಗ್ರಿ ಹೆಚ್ಚಿತ್ತು, ಅಂದರೆ 40.2 ಡಿಗ್ರಿ ಸೆಲ್ಷಿಯಸ್! ಬಳ್ಳಾರಿ 40 ಡಿಗ್ರಿ ದಾಟಿ 40.2 ಡಿಗ್ರಿ ಸೆಲ್ಷಿಯಸ್ ತಾಪಮಾನ ಹೊಂದಿದ್ದರೆ, ರಾಯಚೂರಿನ ತಾಪಮಾನ 39 ಡಿಗ್ರಿ ಸೆಲ್ಷಿಯಸ್ ಆಗಿತ್ತು



ಅದಿತಿಮಾನಸ ಟಿ.ಎಸ್.
ಹವ್ಯಾಸಿ ಲೇಖಕಿ

ಸತತವಾಗಿ ಮೂರನೇ ವರ್ಷವೂ ಬರಕ್ಕೆ ತುತ್ತಾಗಿದೆ ನಮ್ಮ ರಾಜ್ಯ. ಸಾಲದ್ದಕ್ಕೆ ಈ ವರ್ಷ ಶಾಖ ತರಂಗ (heat wave) ಕೂಡ ಕರ್ನಾಟಕವನ್ನು ಕಾಡುತ್ತಿದೆ. ಉರಿಯುತ್ತಿರುವ ಬೆಂಕಿಗೆ ತುಪ್ಪ ಸುರಿದಂತೆ, 40 ಡಿಗ್ರಿ ಸೆಲ್ಷಿಯಸ್ ಅನ್ನು ಮೀರಿದ ತಾಪಮಾನ ನೀರಿನ ಅಭಾವವನ್ನು ಹೆಚ್ಚಿಸುತ್ತಿದೆ. ರಾಜ್ಯದ 176 ರಲ್ಲಿ 160 ತಾಲೂಕುಗಳನ್ನು ಈಗಾಗಲೇ ಬರ ಪೀಡಿತ ಎಂದು ಘೋಷಿಸಲಾಗಿದೆ. ಕರ್ನಾಟಕದ 12 ರಲ್ಲಿ 9 ಜಲಾಶಯಗಳಲ್ಲಿ ಶೇಖಡಾ 20 ಕ್ಕಿಂತಲೂ ಕಡಿಮೆ ನೀರಿದೆ. ಆಗಸ್ಟ್‌ನಿಂದ ಡಿಸೆಂಬರ್ ತಿಂಗಳಲ್ಲಿ ಮಳೆ ಶೇಖಡಾ 40 ರಿಂದ 70ರಷ್ಟು ಕಡಿಮೆಯಾಗಿದೆ.

ಕುಡಿಯುವ ನೀರು, ಕೃಷಿಗೆ ನೀರು, ಜಾನುವಾರುಗಳಿಗೆ ನೀರು ಸಿಗುವುದು ಕಷ್ಟವಾಗಿದೆ. ಹಾಗಾಗಿ ಬೆಳೆಯೂ ಅರ್ಧದಷ್ಟು ಕಡಿಮೆಯಾಗಿದೆ. ಇಡೀ ರಾಜ್ಯವೇ ಈ ಪರಿಸ್ಥಿತಿಯಿಂದ ಒದ್ದಾಡುತ್ತಿದೆ ಉತ್ತರ ಕರ್ನಾಟಕದಲ್ಲಿ ಇದರ ಪ್ರಭಾವ ಹೆಚ್ಚಾಗಿಯೇ ಇದೆ. ಬರ ಪರಿಹಾರ ಕ್ರಮಗಳನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದ್ದರೂ ಸಮಸ್ಯೆ ಹತೋಟಿಯಲ್ಲಿ ಇಲ್ಲ.

ಖಾಸಗಿ ಹವಾಮಾನ ಸಂಸ್ಥೆಯೊಂದು ನಡೆಸಿದೆ. ಇತ್ತೀಚಿನ ಹವಾಮಾನ ಮುನ್ಸೂಚನೆ ವರದಿ ಪ್ರಕಾರ ಕರ್ನಾಟಕ ಇನ್ನೊಂದು ವರ್ಷವೂ ಬರ ಕಾಣಲಿದೆಯಂತೆ. ಈ ವರ್ಷವೂ ಕಡಿಮೆ ಮಳೆಯಾಗಲಿದೆ. ಪ್ರತಿ ಬಾರಿಯಂತೆ ದೇಶದಲ್ಲಿ, ಈ ಬಾರಿ ಸಾಧಾರಣ ನೈಋತ್ಯ ಮುಂಗಾರು ಆಗುವುದು ಎಂದು ಪವನಶಾಸ್ತ್ರ ಇಲಾಖೆ (India Meteorological department, IMD) ಮುನ್ಸೂಚನೆ ನೀಡಿತ್ತು. ಮುಂಬರುವ ಮಳೆಗಾಲದಲ್ಲಿ ಶೇಖಡಾ 96 ರಷ್ಟು ಮಳೆ ಯಾಗುವ ಸಾಧ್ಯತೆ ಇದೆ ಎಂದೂ ಇಲಾಖೆ ಹೇಳಿದೆ.

ಬರ ಸಮಸ್ಯೆಯಿಂದಾಗಿ ರಾಜ್ಯದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಕಳೆದ 3 ವರ್ಷಗಳಲ್ಲಿ